ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 12-16
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕುದರಿಮೋತಿ ಮತ್ತು ನೀಲಗಿರಿ

**ಡಾ. ಪ್ರವೀಣ ಪೋಲಿಸ್ ಪಾಟೀಲ**
ಉಪನ್ಯಾಸಕರು, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ

**Abstract:**
*"ಖಡ್ಗವಾಗಲಿ ಕಾವ್ಯ ; ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ". ಎನ್ನುವ ಬಂಡಾಯದ ಧೋರಣೆಯಲ್ಲಿಯೇ ಬೆಳೆದು ಬಂದು, ಮಾನವೀಯತೆಯನ್ನೇ ಮಾತೃಭಾಷೆಯನ್ನಾಗಿ ತಮ್ಮ ಕಾವ್ಯವನ್ನು ಕಟ್ಟುತ್ತಲೇ, ಮಾನವೀಯ ಸಮಾಜ ನಿರ್ಮಾಣದ ಆಶಯದೊಂದಿಗೆ ಬದುಕು ಹಾಗೂ ಬರವಣಿಗೆ ಎರಡೂ ಒಂದೇ ಎಂದು ಬದುಕುತ್ತಿರುವ ಅಲ್ಲಮಪ್ರಭು ಬೆಟ್ಟದೂರರು ಈ ನೆಲದ ಮಹತ್ವದ ಕವಿಯಾಗಿದ್ದಾರೆ. ಹೋರಾಟದ ಪರಿಸರವಿರುವ ಕುಟುಂಬದಲ್ಲಿ ಬೆಳೆದು ಬಂದ ಇವರು ಬದುಕಿನದ್ದಕ್ಕೂ ಹೋರಾಟವನ್ನೇ ಜೀವಾಳವಾಗಿಸಿಕೊಂಡಿದ್ದಾರೆ. ಹೀಗಾಗಿ ಕವಿಯಾಗಿ ಗುರುತಿಸುವುದಕ್ಕಿಂತ ಹೆಚ್ಚಾಗಿ ಇವರನ್ನು ಹೋರಾಟಗಾರರನ್ನಾಗಿ ಗುರುತಿಸಲಾಗುತ್ತದೆ. ಗೋಕಾಕ್ ಚಳುವಳಿ, ಕೊಪ್ಪಳ ಜಿಲ್ಲಾ ರಚನಾ ಹೋರಾಟ, 371 ಜೆ ಜಾರಿ ಹೋರಾಟ, ಕುದರಿಮೋತಿ ಹೋರಾಟ, ಬಲ್ಡೋಟಾ ವಿಸ್ತರಣಾ ವಿರೋಧಿ ಹೋರಾಟ, ಅಸ್ಪೃಶ್ಯತಾ ನಿವಾರಣಾ ಹೋರಾಟಗಳು, ಅತ್ಯಾಚಾರ, ಶೋಷಣೆ ವಿರುದ್ಧದ ಪ್ರತಿಭಟನೆಗಳಲ್ಲಿ ಇವರ ಪಾತ್ರ ತುಂಬಾ ಪ್ರಮುಖವಾಗಿರುವುದನ್ನು ಕಾಣುತ್ತೇವೆ. ಅಲ್ಲಮಪ್ರಭು ಬೆಟ್ಟದೂರರ ಹೆಸರು ಇಂತಹ ಅನೇಕ ಹೋರಾಟಗಳಲ್ಲಿ ಚಿರಸ್ಥಾಯಿಯಾಗಿ ನಿಂತಿದೆ. ಅದರಲ್ಲಿ ಪ್ರಮುಖವಾದದ್ದು 'ಕುದರಿಮೋತಿ' ಹೋರಾಟವಾಗಿದೆ.*

**Keywords:** *ಸಮಾಜ, ಹೋರಾಟ, ಕುದರಿಮೋತಿ, ನೀಲಗಿರಿ, ಅಲ್ಲಮಪ್ರಭು ಬೆಟ್ಟದೂರ*

## ಪೀಠಿಕೆ

ಜೂನ್ 11, 1985 ರಂದು ಯಲಬುರ್ಗಾ ತಾಲೂಕಿನ ಕುದರಿಮೋತಿ ಗ್ರಾಮದ ಮಠದ ಸ್ವಾಮಿ, ಪಾರ್ವತಮ್ಮ ಮತ್ತು ಹುಸೇನಬಿ ಎನ್ನುವ ಇಬ್ಬರು ಮಹಿಳೆಯರನ್ನು ಬತ್ತಲೆ ಮಾಡಿ ಮೆರೆಸಿದ ಪ್ರಕರಣ ರಾಜ್ಯದಲ್ಲಿ ಸುದ್ದಿ ಆಯಿತು. ಆ ಸಂದರ್ಭದಲ್ಲಿ ಅಲ್ಲಮಪ್ರಭು ಬೆಟ್ಟದೂರರು ತಮ್ಮ ಅನೇಕ ಗೆಳೆಯರೊಂದಿಗೆ ಆ ಗ್ರಾಮಕ್ಕೆ ಹೋಗಿ ವಿಷಯ ಸಂಗ್ರಹಿಸಿ ಅನೇಕ ಪತ್ರಿಕೆಗಳಿಗೆ ಬರೆದರು ಹಾಗೂ ಹೋರಾಟವನ್ನು ಮಾಡಿದರು. 'ಮಠದ ಸ್ವಾಮಿಗಳು ಎಂದರೆ ನಡೆದಾಡುವ ದೇವರು' ಎನ್ನುತ್ತಿದ್ದ ಸಂದರ್ಭದಲ್ಲಿ ಈ ಹೋರಾಟ ತುಂಬಾ ಮಹತ್ವವನ್ನು ಪಡೆದುಕೊಂಡಿತು. ರಾಜ್ಯದ ಅನೇಕ ಮಠಾಧೀಶರು ಈ ಸಂದರ್ಭದಲ್ಲಿ ಎಚ್ಚರಗೊಂಡಿದ್ದುಂಟು. ಇಂತಹ ಹೋರಾಟಕ್ಕೆ ಧುಮುಕಲು ಹಾಗೂ ಸಮಾಜ, ಧರ್ಮ, ರಾಜಕಾರಣದ ಬಗ್ಗೆ ನೇರ–ನಿಷ್ಠುರತೆಯಿಂದ ಮಾತನಾಡಲು ಬೆಟ್ಟದೂರರಿಗೆ ಕಾರಣವಾದದ್ದು ಬಂಡಾಯ ಸಾಹಿತ್ಯ ಸಂಘಟನೆ. ಇದರ ಪ್ರಭಾವದಿಂದಲೇ 1989ರಲ್ಲಿ ಪ್ರಕಟಗೊಂಡ ಅಲ್ಲಮಪ್ರಭು ಬೆಟ್ಟದೂರರ ಎರಡನೆಯ ಕವನ

**Please cite this article as:** ಪ್ರವೀಣ ಪೋಲಿಸ್ ಪಾಟೀಲ. (2026). ಕುದರಿಮೋತಿ ಮತ್ತು ನೀಲಗಿರಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(2), 12–16

ಸಂಕಲನ 'ಕುದುರಿಮೋತಿ ಮತ್ತು ನೀಲಗಿರಿ'. ಬಂಡಾಯ ಚಿಂತನೆಗಳಿಂದಲೇ ಕೂಡಿದ ಈ ಕವನ ಸಂಕಲನದಲ್ಲಿ ಒಟ್ಟು 39 ಕವಿತೆಗಳಿವೆ.

ಕವಿಯಾದವನು ತನ್ನ ಸೃಜನಶೀಲ ಅಭಿವ್ಯಕ್ತಿಗಾಗಿ ಯಾವುದೇ ಮಾಧ್ಯಮವನ್ನು ಆಯ್ಕೆ ಮಾಡಿಕೊಂಡಾಗಲೂ, ತಾನು ನಂಬಿದ ಸಮಾಜಮುಖಿಯಾದ ಭದ್ರತೆಗೆ ವಿಮುಖವಾಗದೆ, ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಳ್ಳುವುದು ಆರೋಗ್ಯಪೂರ್ಣ ಚಿಂತನ ಕ್ರಮವಾಗಿದೆ. ಈ ರೀತಿಯ ಚಿಂತನ ಕ್ರಮಗಳ ಅಭಿವ್ಯಕ್ತಿಯನ್ನು ಈ ಕವನ ಸಂಕಲನದಲ್ಲಿ ಕಾಣುತ್ತೇವೆ. ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ, ,ಮಾರ್ಕ್ಸ್, ಲೋಹಿಯಾ ಮತ್ತು ಕುವೆಂಪುರವರ ಮಾನವತಾವಾದದ ಸಿದ್ಧಾಂತದ ಪ್ರಭಾವ ಕವಿಯ ಮೇಲಾಗಿರುವುದರ ಕಾರಣವೇ ಇಲ್ಲಿನ ಕವಿತೆಗಳ ನೇಯ್ಗೆಯಾಗಿದೆ.

***"ನಾನು ನಾನಾಗುವುದು***
***ಹಾಗೆಂದರೇನು?"*** [1]

ಎಂದು ಇಲ್ಲಿ ಕವಿ ತನ್ನನ್ನೇ ಆತ್ಮ ವಿಮರ್ಶೆಗೊಳಪಡಿಸಿಕೊಳ್ಳಬೇಕು ಎನ್ನುತ್ತಾರೆ. ಶತಮಾನಗಳಿಂದಲೂ ಹೆಣ್ಣಿನ ಮೇಲಾಗುತ್ತಿರುವ ಶೋಷಣೆಯ ಬಗ್ಗೆ ಕವಿಗೆ ಕನಿಕರಕ್ಕಿಂತಲೂ ಹೆಚ್ಚಾಗಿ ಆಕ್ರೋಶವಿರುವುದನ್ನ 'ಕಾಮಣ್ಣ' ಎನ್ನುವ ಕವಿತೆಯಲ್ಲಿ ಕಾಣುತ್ತೇವೆ. ಪಂಚೇಂದ್ರಿಯಗಳನ್ನು ಬೇಕಾ ಬಿಟ್ಟಿಯಾಗಿ ಹರಿಬಿಡುತ್ತಿರುವ ನಿತ್ಯನೂತನ ಕಾಮಣ್ಣರ ಕತೆಯನ್ನು ಸೂಕ್ಷ್ಮವಾಗಿ ಹೀಗೆ ಹೇಳುತ್ತಾರೆ,

***"ಅಣ್ಣ ನಿನ್ನ ಕೈಯೊಳಗೆ ಸಿಕ್ಕವನು***
***ಸುಟ್ಟು ಆಗುತ್ತಾನೆ ಸುಣ್ಣ***
***ಕಳೆದುಕೊಳ್ಳುತ್ತಾನೆ ಬಣ್ಣ***
***ಕಾರಣವಿಷ್ಟೆ: ನೀ ಬಿಡುತ್ತಿ ಹೆಣ್ಣ ಬಾಣ".*** [2]

ಸಂಪ್ರದಾಯದ ಸೋಗಿನಲ್ಲಿ ನಾವು ಕಾಮದಹನ ಮಾಡುತ್ತೇವೆ ಆದರೆ ಅದು ಫಿನಿಕ್ಸ್‌ನಂತೆ ಪುನರ್ಜನ್ಮ ಪಡೆದು ತನ್ನ ಪ್ರಾಬಲ್ಯವನ್ನು ಸಾಧಿಸುವ, ಕಾಮಣ್ಣರ ನಿಜ ದಹನವಾಗುತ್ತಿಲ್ಲವಲ್ಲ ಎನ್ನುತ್ತಾರೆ ಕವಿ.

'ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ' ಎನ್ನುವ ಗಾದೆ ಜನ ಜನಿತವಾದದ್ದು. ಆದರೆ ಕವಿ 'ಮಾತು' ಎನ್ನುವ ಕವಿತೆಯಲ್ಲಿ

***"ಮಾತು ಬಲ್ಲವನಿಲ್ಲ***
***ಬಲ್ಲವನಿದ್ದರೂ ಅವನಿಗೆ ಬಲವಿಲ್ಲ"*** [3]

ಎಂದು ಹೇಳುತ್ತಲೇ ಮಾತಿನ ಮರ್ಮಗಳನ್ನು ಸೂಚ್ಯವಾಗಿ ಗುರುತಿಸುತ್ತಾರೆ. ಮಾತು ಈಗ ರಾಜಕಾರಣಿಗಳ ಬಂಡವಾಳವಾಗಿ ಉಳಿದುಕೊಂಡಿದೆ. ಮಾತು ಶೋಷಣೆ ಹಾಗೂ ಘೋಷಣೆಗೆ ಪ್ರಮುಖ ವಸ್ತುವಾಗಿದೆ. ಇದರಿಂದ ಕ್ರಿಯೆಯ ಶಿಸ್ತು ಕಳೆದುಹೋಗುತ್ತಿದೆ, ಹೀಗಾಗಿ ಮಾತಿನ ಮೌಲ್ಯ ಕಡಿಮೆಯಾಗಿದೆ ಎನ್ನುತ್ತಾರೆ.

***"ಆಚಾರವನ್ನೇ ಪ್ರಶ್ನಿಸುವುದು ವಿಚಾರ***
***ವಿಚಾರವನ್ನು ಕೆಳಕ್ಕೆ ತುಳಿಯುವುದೇ ಆಚಾರ"*** [4]

ಎಂದು ಕವಿ ಆಚಾರ–ವಿಚಾರಗಳ ಕುರಿತು ಮಾತನಾಡುತ್ತಾರೆ. ಹಾಗೇನೆ ಸಮಾಜದ ವಿವಿಧ ರೀತಿಯ ಮೂಢನಂಬಿಕೆಗಳ, ಆಚಾರಗಳ ಕುರಿತಾಗಿ, ದೇವರು, ಧರ್ಮಗಳ ಹೆಸರಿನಲ್ಲಿ ಮಾಡುತ್ತಿರುವ ಅವಕೃತ್ಯಗಳನ್ನು ಬಿಚ್ಚಿಟ್ಟಿದ್ದಾರೆ. ಗ್ರಹ ಅಡ್ಡ ಬಂದರೆ ಗ್ರಹಣವಾಗುತ್ತದೆ. ಆದರೆ ನಮ್ಮ ಧರ್ಮಗ್ರಹದಿಂದ ಬುದ್ಧಿಗೆ ಗ್ರಹಣ ಹಿಡಿದಿದೆ ಎನ್ನುತ್ತಾರೆ. "ನನಗೆ ದೇವರು, ಧರ್ಮ ಎರಡರಲ್ಲೂ ನಂಬಿಕೆ ಇಲ್ಲ. ಆದರೆ ಆಧ್ಯಾತ್ಮ, ಧ್ಯಾನ, ಯೋಗ, ಜಿಜ್ಞಾಸೆ, ನೈತಿಕತೆಯಲ್ಲಿ ನಂಬಿಕೆ ಇದೆ. ಮನುಷ್ಯ ನೀತಿವಂತನಾಗಿ ಬಾಳಬೇಕೆಂದು ಬುದ್ಧ ಏನು ಹೇಳಿದ್ದಾನೆ ಅದರಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆ. ನಂತರ ಜನಪರವಾದ ವಿಚಾರಗಳಲ್ಲಿ ನನಗೆ ನಂಬಿಕೆ ಇದೆ" ಎನ್ನುವ ಕವಿ ಡಾ. ಸಿದ್ದಲಿಂಗಯ್ಯನವರ ಈ ಮಾತಿಗೆ ಅನ್ವಯವಾಗುವಂತೆಯೇ ಇಲ್ಲಿನ ಕವಿತೆಗಳು ಅಭಿವ್ಯಕ್ತಗೊಂಡಿವೆ. ಈ ಹಿನ್ನೆಲೆಯಲ್ಲಿ 'ತಲೆಬುರುಡೆ, ದೇವರಗೂಳಿ, ತೆರೆದ ಬಾಗಿಲು, ಮುದ್ದಿನ ಗಿಳಿ, ಅವಮಾನ, ಸ್ನೇಹ ಬೇಕೆ ಸ್ನೇಹ, ಕಾರ್ತೀಕ, ಕಣ್ಣುಗಳ ನೆಲಕೆ ತಂದವರು, ಕವಿತಾ, ಎಲ್ಲಿರುವೆ

ತಂದೆ ಮಾದ ಬಾರೋ, ಅವಳು, ಹಳೆಯ ದಿನಚರಿ ತಿರುವಿ ಹಾಕಿದ ಮೇಲೆ, ಒಂದು ರಾತ್ರಿ' ಎನ್ನುವ ಕವಿತೆಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಕಾಣುತ್ತೇವೆ. ಎಲ್ಲಾ ಜಾತಿಯ ಬಡವರು, ಶ್ರಮಿಕರು, ಶೋಷಿತರು ಮನುಷ್ಯತ್ವದ ವೇದಿಕೆಯಡಿ ಏಕೀಭವಿಸಿ ಹೋರಾಡಿದಾಗ ಮಾತ್ರ, ಜಾತಿ ರಹಿತ ಮನುಷ್ಯ ಸಮಾಜ ನಿರ್ಮಿತಿ ಸಾಧ್ಯ, ಎಂಬುದರ ಚಿತ್ರಣವನ್ನು ಈ ಮೇಲಿನ ಕವಿತೆಗಳು ಕಟ್ಟಿಕೊಡುತ್ತವೆ.

ಒಬ್ಬ ಕವಿಗೆ ಸಾಮಾಜಿಕ ಪ್ರಜ್ಞೆ ಎಷ್ಟು ಮುಖ್ಯವೋ, ರಾಜಕೀಯ ಪ್ರಜ್ಞೆ ಕೂಡ ಅಷ್ಟೇ ಮುಖ್ಯವಾಗಿ ಇರಬೇಕಾಗುತ್ತದೆ. ಅಂತಹ ರಾಜಕೀಯ ಪ್ರಜ್ಞೆಯನ್ನು ಬೆಟ್ಟದೂರರ ಅನೇಕ ಕವಿತೆಗಳಲ್ಲಿ ಕಾಣುತ್ತೇವೆ. ಇವರ 'ಕುಂಕುಮದ ಕಲಿಗಳು' ಎನ್ನುವ ಕವಿತೆಯಲ್ಲಿ ಮನುವಾದಿಗಳು ಅಧಿಕಾರದ ಗದ್ದುಗೆ ಏರಿದಾಗ ಆಗುವ ಅವಾಂತರಗಳ ಬಗ್ಗೆ ಹೀಗೆ ಮಾತನಾಡುತ್ತಾರೆ,

***"ಕುಂಕುಮದ ಕಲಿಗಳು***  
***ತುಪ್ಪದ ತಲೆಗಳು***  
***ದೆಹಲಿ ಜುಟ್ಟವ ಹಿಡಿವರಂತೆ ಕೇಳಿರಣ್ಣಾ.***  
***ಗುಡಿಗುಂಡಾರ ಎದ್ದಾವು***  
***ತೀರ್ಥಕ್ಷೇತ್ರ ಬೆಳದಾವು***  
***ಮಠಮಾನ್ಯ ತೋಳಗ್ಯಾವು***  
***ವೇದ ಘೋಷ ಮೊಳಗ್ಯಾವು***  
***ಮನು ಮತ್ತೆ ಬಂದಾನು***  
***ಬುರ್ಕಾ ಹಾಕ್ಸಿ ನಿಂತಾನು***  
***ಜಾತಿ ಬೀಜ ಬೆಳದಾವು***  
***ಧರ್ಮದ ಕತ್ತಿ ತೊಳಗ್ಯಾವು"*** [5]

ಎಂದು ದೆಹಲಿ ಗದ್ದುಗೆಯೇರಿದ ರಾಜಕೀಯ ನಾಯಕರ ಮನಸ್ಥಿತಿಯನ್ನು, ಅವರ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸುತ್ತಾರೆ. ಹಾಗೇನೆ ದೇವ ಭಾಷೆಯನ್ನೇ ರಾಷ್ಟ್ರ ಭಾಷೆಯನ್ನಾಗಿಸುವ ಅವರ ಹುನ್ನಾರಗಳನ್ನು ಟೀಕಿಸುತ್ತಾರೆ. ಈ ಮೂಲಕ ಕೋಮುವಾದಿಗಳು ಅಧಿಕಾರದ ಚುಕ್ಕಾಣಿ ಹಿಡಿದಾಗ ಏನೆಲ್ಲ ಅವಘಡಗಳಾಗಿವೆ ಎಂಬುದನ್ನು 'ವಾಜಪೇಯ-ಭಾಜಪೇಯ' ಎನ್ನುವ ಕವಿತೆಯಲ್ಲಿ ತುಂಬಾ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ.

***"ಸಂಸ್ಕೃತಿ ಸಂಪ್ರದಾಯ ನಂಬಿಕೆಯೆಂಬ***  
***ಸಾವಿರಾರು ವರ್ಷಗಳ ಬಗ್ಗಡ ನೀರು***  
***ವೇದ ಪುರಾಣ ಮೀಮಾಂಸೆಯೆಂಬ ಸಕ್ಕರೆ***  
***ಅಕ್ಕರೆಯಿಂದ ಕೂಡಿಸಿದ್ದು***  
***ಭಕ್ಕರಿ ತಿನ್ನುವವರಿಗಾಗಿ***  
***ಈ ಪೇಯದ ಬಣ್ಣ ಕಾವಿ***  
***ಕಣ್ಗೆ ಸನಾತನ ಸವಿ."*** [6]

ಎಂದು ಕೊಳಕು ಸಂಪ್ರದಾಯಗಳನ್ನೇ ಹೊಸ ರೂಪದಲ್ಲಿ ನೀಡುತ್ತಿರುವ ಧರ್ಮಾರ್ಥಕರು ಎಲ್ಲ ತತ್ವ ಸಿದ್ಧಾಂತಗಳನ್ನು ಗಾಳಿಗೆ ತೂರಿ ಅಧಿಕಾರ ನಡೆಸುತ್ತಿರುವವರನ್ನು ನೇರವಾಗಿ ಖಂಡಿಸಿದ್ದಾರೆ. ಹಾಗೇನೆ ಇವರ 'ನೀಲಗಿರಿ' ಎನ್ನುವ ಕವಿತೆಯಲ್ಲಿ ಪರಿಸರದ ಕಾಳಜಿಯನ್ನು ಹಾಗೂ ನೀಲಗಿರಿ ಮರಗಳನ್ನು ಎಲ್ಲ ಕಡೆಗೂ ಬೆಳಸಬೇಕೆನ್ನುವ ಸರ್ಕಾರದ ಈ ನಿರ್ಧಾರದಿಂದ ಪರಿಸರ ಕೆಡುವುದು ಹಾಗೂ ಅಂತರ್ಜಲ ಬತ್ತುವುದು, ಕೋಗಿಲೆ ಕಾಗೆಯ ಗೂಡಿನಲಿ ತತ್ತಿಯನಿಟ್ಟು ಬೆಳೆಸುವ ಹಾಗೆ ನೀಲಗಿರಿಯನ್ನು ಸರ್ಕಾರವೇ ಬೆಳೆಸುವ ಕ್ರಮವನ್ನು ಪ್ರತಿರೋಧಿಸಿದ್ದಾರೆ. 'ಭಾರತ ಇಥಿಯೋಪಿಯಾ ಆದರೂ ಸರಿ, ಬೇಕೆಮಗೆ ನೀಲ ನೀಲಗಿರಿ' ಎನ್ನುವ ಸರ್ಕಾರದ ನಿರ್ಧಾರ ಬಡವರ ಉದ್ಧಾರಕಲ್ಲ, ಬಿರ್ಲಾನುದ್ಧಾರಕ್ಕೆ ಎಂದು ಉಳ್ಳವರ ಪರವಾದ ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಾರೆ. 'ಗಡ್ಡದ ಗುರು ಗೆದ್ದನಂತೆ, ನಮಗೆ ಇಂಥವರು ಬೇಕು, ಹಂದಿಗಳು, ಈ ಕಪ್ಪು ಮನುಷ್ಯ' ಎನ್ನುವ ಕವಿತೆಗಳಲ್ಲಿ ಪ್ರಭುತ್ವ ವಿರೋಧಿ ನೆಲೆಯನ್ನು ಕಾಣುತ್ತೇವೆ. ಆಳುವ ಪಕ್ಷ ಯಾವುದೇ ಇರಲಿ, ಜನ ವಿರೋಧಿ ನೀತಿಯನ್ನು ಪ್ರತಿರೋಧಿಸುವ ಗುಣ ಇಲ್ಲಿನ ಕವಿತೆಗಳ ಸತ್ವವಾಗಿದೆ.

ಕವಿಗೆ ವರ್ತಮಾನದ ಘಟನೆಗಳಿಗೆ ತಕ್ಷಣವೇ ಪ್ರತಿಸ್ಪಂದಿಸುವ ಗುಣವಿರಬೇಕು. ಶೋಷಣೆ,

ಅತ್ಯಾಚಾರಗಳಂತಹ ಸಾಮಾಜಿಕ ಕೃತ್ಯಗಳನ್ನು ಖಂಡಿಸಿ ಬೀದಿಗಿಳಿದು ಹೋರಾಡುವ ಬೆಟ್ಟದೂರರು ಅಂತಹ ಪ್ರಕರಣಗಳನ್ನೇ ಕಾವ್ಯದ ವಸ್ತುವನ್ನಾಗಿ ಬಳಸಿಕೊಂಡು ಅನೇಕ ಕವಿತೆಗಳನ್ನು ರಚಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ಈಗಾಗಲೇ ಚರ್ಚಿಸಿದಂತೆ 'ಕುದರಿಮೋತಿ ಹೋರಾಟದ ಹಾಡು' ಈ ಕವಿತೆಯಲ್ಲಿ, ಕುದರಿಮೋತಿ ಗ್ರಾಮದ ಮಠಾಧೀಶನು ಮಾಡಿದ ಕೃತ್ಯವನ್ನು ಹೀಗೆ ಕಟ್ಟಿ ಕೊಡುತ್ತಾರೆ.

***"ಕುದರಿಮೋತಿ ಸ್ವಾಮಿ***
***ಭಾರಿ ಭರ್ಜರಿ ಆಸಾಮಿ***
***ಆಳು ಕಾಳು ಬಡಿಗಿ ಬೆತ್ತ ಸುತ್ತಮುತ್ತ***
***ರಾಜಕಾರಣಿ ಭಕ್ತರ ಬೇರು ಅತ್ತ ಇತ್ತ***
***ಸೊಕ್ಕಿಗೆದ್ದ ಗೂಳಿ ಹಾಂಗ ಮೂಸಿ ನೋಡಿತು ಅತ್ತ ಇತ್ತ***
***ಯಾರೂ ಸಿಗಲಿಲ್ಲಂತ ಭಕ್ತಳ ಮೇಲೆ ಹಾರಿಬಿತ್ತ"*** [7]

ಎಂದು ಹೆಣ್ಣಿನ ಮೇಲೆ ಧರ್ಮ, ಭಕ್ತಿಯ ನೆಪದಲ್ಲಿ ಮಠಾಧೀಶರು ಮಾಡುವ ಅನಾಚಾರಗಳನ್ನು ಬಯಲಿಗೆಳೆಯುತ್ತಾರೆ. ನಾಗರಿಕ ಸಮಾಜವೇ ತಲೆ ತಗ್ಗಿಸುವ ಅನಾಗರಿಕ ವರ್ತನೆಗಳು ಮಠ–ಮಂದಿರಗಳ ಹೆಸರಿನಲ್ಲಿ ಇಂದಿಗೂ ನಡೆಯುತ್ತಲೇ ಇವೆ. ಆದರೆ ಅಂಧ ಭಕ್ತರಾದ ನಾವುಗಳು ಎಚ್ಚರಗೊಳ್ಳುವವರೆಗೆ ಮಠಾಧೀಶರು ಮತ್ತಿನಲ್ಲೇ ಮೆರೆಯುತ್ತಿರುತ್ತಾರೆ. ಹುಸೇನಬಿ, ಪಾರ್ವತಿ ಎನ್ನುವ ಅಮಾಯಕ ಮಹಿಳೆಯರನ್ನ ಭಕ್ತರೆದುರಿನಲ್ಲೇ ಬತ್ತಲೆಗೊಳಿಸಿ ಅವಮಾನದ ಕೆಂಡದುಂಡೆಯನ್ನು ಅವರ ಉಡಿಯಲ್ಲಿ ಹಾಕುವ ಕೃತ್ಯ ನಡೆಯಿತು. ಎಲ್ಲಿಯವರೆಗೆ ಜನಸಾಮಾನ್ಯರು ಮೌನವಾಗಿರುತ್ತಾರೋ ಅಲ್ಲಿಯವರೆಗೆ ಇಂತಹ ಘಟನೆಗಳಿಗೆ ಪೂರ್ಣವಿರಾಮ ಹಾಕಲು ಸಾಧ್ಯವಿಲ್ಲ.

***"ಆಳುವ ಪ್ರಭುಗಳ ಕೈಯಲ್ಲಿ***
***ದಾಳವಾಗಲಿಲ್ಲ ಬೆಂಜಮಿನ್***
***ಕೇಳುವ ಜನಗಳ ಕೊರಳಾದನೋ ಬೆಂಜಮಿನ್***
***ಅದಕ್ಕಾಗಿಯೇ ನೇಣು !***
***ನಗು ನಗುತ್ತ ಒಡ್ಡಿದನಲ್ಲೋ ಗೋಣು !"*** [8]

ಎನ್ನುವ 'ಬೆಂದ ಮನಸ್ಸಿಗೆ ಬೆಂಜಮಿನ್' ಕವಿತೆಯಲ್ಲಿ, ಆಳುವ ಪ್ರಭುಗಳಿಗೆ ಎಚ್ಚರಿಕೆಯಾಗಿ, ಆದರ್ಶ ಹೋರಾಟಗಾರನಾಗಿದ್ದ ಬೆಂಜಮಿನ್ ನನ್ನ ಮನಸ್ಸಿನಲ್ಲಿ ಬೆಳೆಯುತ್ತಲೇ ಇದ್ದಾನೆ ಎಂದು ಕವಿ ಪ್ರಭುತ್ವ ವಿರೋಧಿಗುಣವನ್ನು ಅಭಿವ್ಯಕ್ತಿಸಿದ್ದಾರೆ.

ಪಂಜಾಬ್‌ನಲ್ಲಿ ಪ್ರತ್ಯೇಕ ಖಲಿಸ್ತಾನ ರಾಜ್ಯದ ಬೇಡಿಕೆಗೆ ಬೆಂಬಲ ನೀಡಿ, ಖಲಿಸ್ತಾನ್ ಚಳುವಳಿಯ ಪ್ರಮುಖ ನಾಯಕ, ವಿವಾದಾತ್ಮಕ ಸಿಖ್‌ನ ಧಾರ್ಮಿಕ ನಾಯಕನೆನಿಸಿದ ಜರ್ನೈಲ್‌ಸಿಂಗ್ ಭಿಂದ್ರನ್‌ವಾಲೆ ಕುರಿತಾದ ಕವಿತೆ 'ಭಿಂದ್ರನ್‌ವಾಲೆ' ಹತ್ಯೆಯ ನಂತರ ರಚಿಸಿದ್ದಾಗಿದೆ. ಹಿಂಸಾಚಾರ ಮತ್ತು ಭಯೋತ್ಪಾದನೆಯನ್ನು ಉತ್ತೇಜಿಸಿದ ವ್ಯಕ್ತಿ ಎಂದು ಪರಿಗಣಿಸಿ 1984ರಲ್ಲಿ ಭಾರತೀಯ ಸೇನೆ ಅಮೃತಸರದಲ್ಲಿನ ಸಿಖ್‌ರ ಪವಿತ್ರ ದೇವಾಲಯವಾದ ಸ್ವರ್ಣಮಂದಿರದೊಳಗೆ ನುಗ್ಗಿ ಹತ್ಯೆ ಮಾಡಿತು. ಇದನ್ನ ಕವಿತೆಯಲ್ಲಿ,

***"ಭಿಂದ್ರನ್‌ವಾಲೆ ಭಿಂದ್ರನ್‌ವಾಲೆ***
***ಬೆಂಕಿಯ ನೃತ್ಯದ ಭೀಕರ ಬ್ಯಾಲೆ,***
***ಸುವರ್ಣ ಮಂದಿರವೇ ರಂಗ ಶಾಲೆ***
***ಕುಣಿದವರ್‍ಯಾರು, ಮಣಿದವರ್‍ಯಾರು***
***ಗೊತ್ತೇ ಗೊತ್ತೇ ಗೊತ್ತೇ***
***ಏ ದಾಸ್ಯದ ತೊತ್ತೆ?"*** [9]

ಎನ್ನುತ್ತಾ ಈ ಹತ್ಯೆಯನ್ನು ಖಂಡಿಸುತ್ತಾರೆ.

1985ರಲ್ಲಿ ಮೈಸೂರಿನಲ್ಲಿ ನಡೆದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದ ಹಿನ್ನೆಲೆಯಲ್ಲಿ, ಅಧ್ಯಕ್ಷರಾಗಿದ್ದ ಶಿವರಾಮ ಕಾರಂತರ ಕುರಿತಾದ 'ಕಾರಂತ ಮರಳಿ ಮಣ್ಣಿಗೆ' ಎನ್ನುವ ಕವಿತೆಯಲ್ಲಿ ಕಾರಂತರ ಧೋರಣೆಯನ್ನೂ ಖಂಡಿಸಿ, 'ಕಾರಂತ ಭಾಗವತ ಕಾರಂತ ಭಾಗ್ಯವಂತ, ಕಾರಲ್ಲಿ ಮೆರೆದಂತ ಧೀಮಂತ, ಚೋಮನ ದುಡಿ ಇವರ ಕೃತಿಯಂತ, ಕುಡಿಯರ ಕೂಸು ಇವರ ಮಡಿಯಂತ, ಮರಳಿ ಮಣ್ಣಿಗೆ ನಡದಾರಂತ– ಕಾರಂತ' ಎಂದು ಬರೆಯುತ್ತಾರೆ. ಹೀಗೆ 'ಗಾಂಧಿ, ಗೋವಾ:

ಪ್ರಾಂತವಾದದ ಫೆನಿ, ಹೋಗೋಣವೇ ಮಠದ ಕಡೆಗೆ, ಗವಿಸಿದ್ಧ, ತುಕ್ಕು ಹಿಡಿದ ಉಕ್ಕಿನ ಕಾರ್ಖಾನೆಯ ಹಾಡು' ಎನ್ನುವ ಕವಿತೆಗಳು ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಘಟನೆಗಳಿಗೆ ತಕ್ಷಣದ ಪ್ರತಿಕ್ರಿಯೆಯಾಗಿ ಕಂಡುಬರುತ್ತವೆ.

'ಕೊಳಕು ಸಂಪ್ರದಾಯಕ್ಕೆ ಹೇಳುವ ವಿದಾಯವೇ ಬಂಡಾಯ' ಎನ್ನುವ ಅಲ್ಲಮಪ್ರಭು ಬೆಟ್ಟದೂರರ ಒಟ್ಟು ಕವಿತೆಗಳು 'ಮನುಷ್ಯ ಕುಲಂ, ತಾನೊಂದೇ ವಲಂ' ಎನ್ನುವ ಮೌಲ್ಯಕ್ಕೆ ಸರಿಸಮವಾಗಿ ನಿಲ್ಲುತ್ತವೆ.

**ಕೊನೆ ಟಿಪ್ಪಣಿ:**

1. ಅಲ್ಲಮಪ್ರಭು ಬೆಟ್ಟದೂರು. (2019). *ದ್ರಾವಿಡರು ನಾವು ದ್ರಾವಿಡರು.* ಪುಟ ಸಂಖ್ಯೆ. 33
2. *ಅದೇ.* ಪುಟ ಸಂಖ್ಯೆ. 34
3. *ಅದೇ.* ಪುಟ ಸಂಖ್ಯೆ. 35
4. *ಅದೇ.* ಪುಟ ಸಂಖ್ಯೆ. 36
5. *ಅದೇ.* ಪುಟ ಸಂಖ್ಯೆ. 49
6. *ಅದೇ.* ಪುಟ ಸಂಖ್ಯೆ. 59
7. *ಅದೇ.* ಪುಟ ಸಂಖ್ಯೆ. 72
8. *ಅದೇ.* ಪುಟ ಸಂಖ್ಯೆ. 75
9. *ಅದೇ.* ಪುಟ ಸಂಖ್ಯೆ. 68